ಉದಯವಾಣಿ

# ಕೆರೆಗಳ ಕಾಯದ ಸರ್ಕಾರ 500 ಕೋಟಿ ರೂ. ಪ್ರಹಾರ

## ಕರ್ನಾಟಕ ಸರ್ಕಾರಕ್ಕೆ ಎನ್‌ಜಿಟಿಯಿಂದ ಖಡಕ್ ಸಂದೇಶ

## ಸರ್ಕಾರ 50, ಬಿಬಿಎಂಪಿ 25 ಕೋಟಿ ಠೇವಣಿಗೆ ತಾಕೀತು

**ನವದೆಹಲಿ:** ಬೆಳ್ಳಂದೂರು, ಅಗರ, ವರ್ತೂರು ಕೆರೆ ಸೇರಿದಂತೆ ಬೆಂಗಳೂರಿನ ಕಲುಷಿತ ಕೆರೆಗಳನ್ನು ಕಾಪಾಡುವಲ್ಲಿ ವಿಫಲವಾಗಿರುವ ಕರ್ನಾಟಕ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಚಾಟಿ ಬೀಸಿದೆ. 500 ಕೋಟಿ ರೂ.ಗಳನ್ನು ಬೆಂಗಳೂರು ವ್ಯಾಪ್ತಿಯ ಕೆರೆಗಳ ಸ್ವಚ್ಛತೆಗಾಗಿ ಮೀಸಲಿಡಬೇಕೆಂದು ಆದೇಶಿಸಿದೆ. ಅಷ್ಟೇ ಅಲ್ಲ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ)ಯಲ್ಲಿ 50 ಕೋಟಿ ರೂ. ಠೇವಣಿ ಇಡುವಂತೆ ಕರ್ನಾಟಕ ಸರ್ಕಾರಕ್ಕೂ, 25 ಕೋಟಿ ರೂ. ಠೇವಣಿ ಇಡಬೇಕೆಂದು ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಗೂ ನಿರ್ದೇಶಿಸಿದೆ.

ಬೆಳ್ಳಂದೂರು ಕೆರೆಯಲ್ಲಿ ಬೆಂಕಿ ಕಾಣಿಸಿಕೊಂಡ ಪ್ರಕರಣದ ಅಂತಿಮ ತೀರ್ಪನ್ನು ಗುರುವಾರ ಪ್ರಕಟಿಸಿದ ಸಂದರ್ಭದಲ್ಲಿ ಈ ಆದೇಶ ನೀಡಿದ ಎನ್‌ಜಿಟಿ ಮುಖ್ಯಸ್ಥ ನ್ಯಾ. ಆದರ್ಶ್ ಕುಮಾರ್ ಗೋಯೆಲ್, ಕೆರೆಗಳ ಪುನರುತ್ಥಾನಕ್ಕೆ ಹಾಗೂ ಕೆರೆಯಂಗಳ ಒತ್ತುವರಿ ಮುಂತಾದ ಅಕ್ರಮ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕೆ ಈ ಹಿಂದೆ ತಾನು ನೀಡಿದ್ದ ಮಾರ್ಗಸೂಚಿಯನ್ನು ಪಾಲಿಸುವಲ್ಲಿ ಸರ್ಕಾರ ವಿಫಲವಾಗಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಮೀಸಲು ನಿಧಿ ರೂಪದಲ್ಲಿ ಸಂಗ್ರಹವಾಗುವ 500 ಕೋಟಿ ರೂ. ಹಣವನ್ನು ಸಂಪೂರ್ಣವಾಗಿ ಕೆರೆಗಳ ಸ್ವಚ್ಛತೆ ಹಾಗೂ ಅಭಿವೃದ್ಧಿಗಾಗಿಯೇ ಬಳಸಬೇಕೆಂದು ಕಟ್ಟುನಿಟ್ಟಾಗಿ ಆದೇಶಿಸಿದರು.

**ಹೊಸ ಮಂಡಳಿ ರಚನೆ:** ತಾನು ಹಿಂದೆ ನೀಡಿದ್ದ ಮಾರ್ಗಸೂಚಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರ ನೇತೃತ್ವದ ಸಮಿತಿಯೊಂದನ್ನು ಸ್ಥಾಪಿಸುವಂತೆ ಸೂಚಿಸಿದ ನ್ಯಾ. ಗೋಯೆಲ್, ಈ ಸಮಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ಸದಸ್ಯರೂ ಹಾಗೂ ಸಂಬಂಧಪಟ್ಟ ಇತರರು ಪ್ರತಿನಿಧಿಗಳಾಗಿರಬೇಕು. ಕೆರೆಗಳ ಸ್ವಚ್ಛತೆಗಾಗಿ ನ್ಯಾಯಾಧಿಕರಣ ಈ ಹಿಂದೆ ಸೂಚಿಸಿದ್ದ ಕ್ರಮಗಳನ್ನು ಸೂಕ್ತವಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಮಾರ್ಗಸೂಚಿಗಳನ್ನು ಈ ಸಮಿತಿ ಇನ್ನೊಂದು ತಿಂಗಳಲ್ಲಿ ತಯಾರಿಸಿ, ಆ ಬಗ್ಗೆ ವರದಿ ನೀಡಬೇಕೆಂದು ಸೂಚಿಸಿದರು.

**ಮತ್ತೆ 100 ಕೋಟಿ!:** ಕಾರ್ಯಸೂಚಿ ಅನುಷ್ಠಾನದಲ್ಲಿ ಪುನಃ ವಿಫಲವಾದರೆ ಸರ್ಕಾರಕ್ಕೆ 100 ಕೋಟಿ ರೂ. ಹಣವನ್ನು ಹೆಚ್ಚುವರಿಯಾಗಿ ಮೀಸಲು ನಿಧಿಯಲ್ಲಿ ಇರಿಸುವಂತೆ ಆದೇಶಿಸುವುದಾಗಿ ಎಚ್ಚರಿಕೆ ನೀಡಿದ ನ್ಯಾ. ಗೋಯೆಲ್, ಈ ಹಿಂದೆ ಎನ್‌ಜಿಟಿಯ ಕಾರ್ಯಸೂಚಿಗಳನ್ನು ಸರಿಯಾಗಿ ಅನುಷ್ಠಾನ ಮಾಡದ ಅಧಿಕಾರಿಗಳ ಪಟ್ಟಿಯನ್ನೂ ತಯಾರಿಸುವಂತೆ ಸರ್ಕಾರಕ್ಕೆ ಸೂಚಿಸಿದ್ದಾರೆ. ಅಲ್ಲದೆ, ಇನ್ನೊಂದು ತಿಂಗಳಲ್ಲಿ ತಯಾರಾಗುವ ಹೊಸ ಮಾರ್ಗಸೂಚಿಗಳನ್ನು ಎಷ್ಟು ಗಡುವಿನೊಳಗೆ ಮುಗಿಸುತ್ತೇವೆಂಬುದನ್ನು ಲಿಖಿತ ರೂಪದಲ್ಲಿ ಎನ್‌ಜಿಟಿಗೆ ಸಲ್ಲಿಸುವಂತೆ ಹೇಳಿದ್ದಾರೆ.

**ಪ್ರಕರಣದ ಹಿನ್ನೆಲೆ:** ಬೆಳ್ಳಂದೂರು ಕೆರೆ ಸಂಪೂರ್ಣವಾಗಿ ಮಲಿನಗೊಂಡು ಭಾರಿ ಪ್ರಮಾಣದಲ್ಲಿ ನೊರೆ ಸಮಸ್ಯೆ ಉಂಟಾದ ಹಿನ್ನೆಲೆಯಲ್ಲಿ 2013ರಲ್ಲಿ ಸರ್ಕಾರ ತಜ್ಞರ ನೇತೃತ್ವದ ಸಮಿತಿಯನ್ನು ರಚನೆ ಮಾಡಿತ್ತು. ಅದರಂತೆ ಕೆರೆಯ ಪರಿಶೀಲನೆ ನಡೆಸಿದ ತಜ್ಞರ ಸಮಿತಿಯು ಕೆರೆ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಶಿಫಾರಸ್ಸು ಮಾಡಿತ್ತು.

▶ 6ನೇ ಪುಟಕ್ಕೆ



### ಸಂತೋಷ್ ಹೆಗ್ಡೆ ಸಮಿತಿ

ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ನೇತೃತ್ವದ ಸಮಿತಿಯಲ್ಲಿ ವಿಜ್ಞಾನಿ ಟಿ.ವಿ.ರಾಮಚಂದ್ರ, ಕರ್ನಾಟಕ ಸರ್ಕಾರ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ತಲಾ ಒಬ್ಬರು ಪ್ರತಿನಿಧಿಗಳು ಇರುತ್ತಾರೆ.

> ಎನ್‌ಜಿಟಿಯ ಹೊಸ ಆದೇಶಗಳ ಅನುಷ್ಠಾನದ ಮೇಲುಸ್ತುವಾರಿಯನ್ನು ನ್ಯಾ. ಹೆಗ್ಡೆಯವರ ನೇತೃತ್ವದ ಸಮಿತಿ ವಹಿಸಿಕೊಳ್ಳಲಿದೆ. ಹಂತ ಹಂತವಾಗಿ ಜಾರಿಗೊಳ್ಳುವ ಕಾಮಗಾರಿಗಳನ್ನೂ ಸಮಿತಿ ಅವಗಾಹನೆ ಮಾಡಲಿದೆ.
>
> • ಸಜ್ಜನ್ ಪೂವಯ್ಯ, ನಮ್ಮ ಬೆಂಗಳೂರು ಪ್ರತಿಷ್ಠಾನ ಪರ ವಕೀಲ

- ಕೆರೆ ಸಂರಕ್ಷಣೆಗಾಗಿ ಐದು ನೂರು ಕೋಟಿ ರೂ. ಮೀಸಲು ನಿಧಿ ಸ್ಥಾಪನೆಗೆ ಎನ್‌ಜಿಟಿ ಸೂಚನೆ
- ಕೆರೆ ಸಂರಕ್ಷಣೆಯಲ್ಲಿ ತನ್ನ ಮಾರ್ಗಸೂಚಿ ಪಾಲಿಸದ್ದಕ್ಕೆ ಹಸಿರು ನ್ಯಾಯಾಧಿಕರಣ ತೀವ್ರ ಅಸಮಾಧಾನ
- ಮಾರ್ಗಸೂಚಿ ಅನುಷ್ಠಾನಕ್ಕೆ ಸೂಕ್ತ ಕಾಯಕಲ್ಪ ನೀಡಲು ನ್ಯಾ. ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ಸಮಿತಿ

### ಕೈಗೊಳ್ಳಬೇಕಾದ ಕಾರ್ಯ

- ಎನ್‌ಜಿಟಿ ನೀಡಿದ್ದ ಮಾರ್ಗಸೂಚಿಗಳ ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಅವಲೋಕನ
- ಕೆರೆಗಳ ಸಂರಕ್ಷಣೆಗಾಗಿ ಸಮಿತಿಯದ್ದೇ ಆದ ಹೊಸ ವೆಬ್‌ಸೈಟ್ ಆರಂಭಿಸಿ, ಜನರಿಂದ ಅಭಿಪ್ರಾಯ ಸಂಗ್ರಹ
- ಕೆರೆಗಳ ಸ್ವಚ್ಛತೆಗಾಗಿ ಕರ್ನಾಟಕ ಸರ್ಕಾರಕ್ಕೆ ತಾನು ನೀಡುವ ಸಲಹೆಗಳ ಅನುಷ್ಠಾನದ ಬಗ್ಗೆ ಮೇಲುಸ್ತುವಾರಿ